ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

# ಕ್ರಿಯಾಯೋಜನೆ

## 2017-18




ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು

ಕರ್ನಾಟಕ ಸರ್ಕಾರ

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕ್ರಿಯಾ ಯೋಜನೆ
# 2017–18

**ಯೋಜನೆ ಮೊತ್ತ**

**ರೂ. 36,743.00 ಲಕ್ಷ**



# ಮುನ್ನಡಿಯ ಸಂಕಲ್ಪ

ಕನ್ನಡ ಮತ್ತು ಸಂಸ್ಕೃತಿ ಎರಡೂ ಪರಸ್ಪರ ಪೂರಕ. ಈ ಭಾಷಿಕ ಸಂಸ್ಕೃತಿಯನ್ನು ಪೋಷಿಸುವ ಮತ್ತು ಪ್ರೋತ್ಸಾಹಿಸುವ ಪ್ರಜಾ ಸರ್ಕಾರದ ಜವಾಬ್ದಾರಿಗಳಿಗೆ ಅನುಗುಣವಾಗಿ 1977ರಲ್ಲಿ ಭಾಷಾಭಿವೃದ್ಧಿ ಇಲಾಖೆ ಮತ್ತು ಸಂಸ್ಕೃತಿ ನಿರ್ದೇಶನಾಲಯಗಳಾಗಿ ಹಂಚಿಹೋಗಿದ್ದ ಇಲಾಖೆಯು ಏಕಛತ್ರದಡಿಯಲ್ಲಿ ಸಂಗಮವಾಗಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಾಗಿ ರಚನೆಗೊಂಡ ಸಂಭ್ರಮಕ್ಕೀಗ ನಲವತ್ತು ತುಂಬಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಚಟುವಟಿಕೆಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಕೊಟ್ಟಿರುವ ಅನುದಾನಗಳು ಸರಿಸುಮಾರು ದುಪ್ಪಟ್ಟಾಗಿದೆ. 2013-14ರಲ್ಲಿ ಸುಮಾರು ರೂ. 170.00 ಕೋಟಿಗಳ ಅನುದಾನವು 2017-18ನೆಯ ಸಾಲಿನಲ್ಲಿ ರೂ. 367.43 ಕೋಟಿ ರೂಪಾಯಿಗಳಾಗಿದೆ. ಅನುಷ್ಠಾನದ ಸಾಧನೆಯ ಸಂತೃಪ್ತಿಯೂ ಬೆನ್ನೆಲುಬಾಗಿ ಬಲ ತಂದಿದೆ.

ಪಾರದರ್ಶಕ ಮತ್ತು ಪರಿಸರ ಸ್ನೇಹಿ ಆಡಳಿತ ವ್ಯವಸ್ಥೆಯ ಮೂಲಕ ಸಿಬ್ಬಂದಿ ಕೊರತೆಯ ನಡುವೆಯೂ ಆಡಳಿತವನ್ನು ಪರಿಣಾಮಕಾರಿಯಾಗಿ ಮತ್ತು ಕಾಲಬದ್ಧವಾಗಿ ಅನುಷ್ಠಾನ ಮಾಡಲು ಸಾಧ್ಯವಾಗಿದೆ. ಇಲಾಖೆಯ ಸೌಲಭ್ಯಗಳನ್ನು ಪಡೆಯಲು ಕಚೇರಿಗೆ ಎಡತಾಕಬೇಕಾಗಿಲ್ಲ. ಆನ್-ಲೈನ್ ಯೋಜನೆಗಳು ಆಡಳಿತವನ್ನು ಜನರ ಮನೆ ಬಾಗಿಲಿಗೆ, ಬೆರಳ ತುದಿಗೆ ತಲುಪಿಸಿದೆ.

ವಿಶ್ವ ಕನ್ನಡ ಸಮ್ಮೇಳನ ಮೂರನೆಯ ಬಾರಿಗೆ ಸಮಾವೇಶಗೊಳಿಸುವ ಕನಸು ನನಸಾಗುತ್ತಿದೆ. ಜಿಲ್ಲೆಗಳಲ್ಲಿ ಅಪೂರ್ಣವಾಗಿದ್ದ ರಂಗಮಂದಿರಗಳ ನಿರ್ಮಾಣಕ್ಕೆ ವಿಶೇಷ ಅನುದಾನದ ಕಸುವು ದೊರೆತಿದೆ. ಖಜಾನೆ-2 ಅಡಿಯಲ್ಲಿ ಸಂಪೂರ್ಣ ಇಲಾಖೆಯು ಪ್ರಾಯೋಗಿಕ ಅನುಷ್ಠಾನಕ್ಕೆ ಒಳಗಾಗಿಯೂ ಬಹುತೇಕ ಎಲ್ಲ ಪ್ರಮುಖ ಯೋಜನೆಗಳನ್ನು ಅನುಷ್ಠಾನ ಮಾಡಲಾಗಿರುವುದರ ಹಿಂದೆ ಅಧಿಕಾರಿ-ಸಿಬ್ಬಂದಿ ವರ್ಗದವರ ಸಂಕಲ್ಪ ಶಕ್ತಿಯ ಪಾತ್ರ ಬಲು ಹಿರಿದು.

ನಾಡಿನ ಜನಪ್ರಿಯ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ, ಇಲಾಖಾ ಸಚಿವರಾದ ಶ್ರೀಮತಿ ಉಮಾಶ್ರೀ, ಸರ್ಕಾರದ ಕಾರ್ಯದರ್ಶಿಗಳಾದ ಶ್ರೀ ಚಕ್ರವರ್ತಿ ಮೋಹನ್, ಅವರ ಸಲಹೆ, ಸಹಕಾರ ಮತ್ತು ನಾಡಿನ ಸಜ್ಜನರ ಮಾರ್ಗದರ್ಶನ ಮತ್ತು ಸಲಹೆಗಳನ್ನು ಮನಃಪೂರ್ವಕವಾಗಿ ನಿರೀಕ್ಷಿಸುತ್ತೇವೆ.

ಬೆಂಗಳೂರು
28-04-2017

(ಕೆ.ಎ. ದಯಾನಂದ)
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ** : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2017-18ನೇ ಸಾಲಿನ ಮುಂದುವರೆದ ಯೋಜನೆ ಮತ್ತು ಇಲಾಖೆಯ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಬಗ್ಗೆ

**ಓದಲಾಗಿದೆ:** ದಿನಾಂಕ 12-04-2017ರ ಸಂಖ್ಯೆ ಕಸನಿ/01/ಬಜೆಟ್/2017-18ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಪತ್ರ

* * * * *

**ಪ್ರಸ್ತಾವನೆ :**

ಮೇಲೆ ಓದಲಾದ ಪತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು 2016-17ನೇ ಸಾಲಿನ ಕಾರ್ಯಕ್ರಮಗಳನ್ನು 2017-18ನೇ ಸಾಲಿಗೆ ಮುಂದುವರೆಸಲು ಹಾಗೂ 2017-18ನೇ ಸಾಲಿನಲ್ಲಿ ಇಲಾಖೆಗೆ ಒದಗಿಸಲಾಗಿರುವ ರೂ. 36,743.00 ಲಕ್ಷಗಳ ಅನುದಾನಕ್ಕೆ ಕಾರ್ಯಕ್ರಮವಾರು ಕರಡು ಕ್ರಿಯಾ ಯೋಜನೆ ರೂಪಿಸಿ, ಅನುಷ್ಠಾನಗೊಳಿಸಲು ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಕಸಂವಾ 189 ಕಸಧ 2017,**
**ಬೆಂಗಳೂರು, ದಿನಾಂಕ : 27/04/2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2016-17ನೇ ಸಾಲಿನ ಕಾರ್ಯಕ್ರಮಗಳನ್ನು 2017-18ನೇ ಸಾಲಿಗೆ ಮುಂದುವರೆಸಲು ಅನುಬಂಧ-1ರಲ್ಲಿನಂತೆ ಹಾಗೂ ಇಲಾಖೆಯ 2017-18ನೇ ಸಾಲಿನ ಕ್ರಿಯಾ ಯೋಜನೆಗೆ ಅನುಬಂಧ-2ರಲ್ಲಿ ಸೂಚಿಸಿರುವಂತೆ, ಈ ಕೆಳಕಂಡ ಷರತ್ತುಗಳೊಂದಿಗೆ ಮಂಜೂರಾತಿ ನೀಡಲಾಗಿದೆ.

1. ಆರ್ಥಿಕ ಇಲಾಖೆಯು ಕಾಲ-ಕಾಲಕ್ಕೆ ಹೊರಡಿಸುವ ಆರ್ಥಿಕ ಮಿತವ್ಯಯ ಆದೇಶಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಹುದ್ದೆಗಳ ಸೃಜನೆ, ವಾಹನ ಮತ್ತು ಪೀಠೋಕರಣಗಳ ಖರೀದಿ ಇತ್ಯಾದಿ ಒಳಗೊಂಡಿದ್ದಲ್ಲಿ, ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸಿ ಪೂರ್ವಾನುಮತಿ ಪಡೆದು, ಕ್ರಮ ಕೈಗೊಳ್ಳುವುದು.
2. ಮುಂದುವರೆದ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ/1/ಟಿಎಫ್‌ಪಿ/2017, ದಿನಾಂಕ: 5-04-2017ರಲ್ಲಿ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ಕಸಂವಾಪ್ರ 112 ಕಸನಿ 2009 ದಿನಾಂಕ 23-01-2012ರಲ್ಲಿ ನಿರ್ದೇಶಕರಿಗೆ/ಆಯುಕ್ತರಿಗೆ ಹಾಗೂ ಇನ್ನಿತರೆ ಕ್ಷೇತ್ರ ಅಧಿಕಾರಿಗಳಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದು.